ವಿ-72 (51)

<u>ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಿ.ಎಂ. ಫಾರೂಕ್ ಇವರು ನಿಯಮ 72ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಹೇಳಿಕೆ</u>

---o---

**ವಿಷಯ**

ಮಂಗಳೂರು ನಗರದ 550 ಎಕರೆ ಪ್ರದೇಶದ ಕೋಣಾಜೆ ವಿಶೇಷ ಆರ್ಥಿಕ ವಲಯದಲ್ಲಿ ಐ.ಟಿ. ಪಾರ್ಕ್ ನಿರ್ಮಿಸಿದ್ದು, ಇದರಲ್ಲಿ 360 ಎಕರೆ ಜಮೀನನ್ನು ಇನ್ಫೋಸಿಸ್ ಕಂಪನಿಗೆ ನೀಡಿದ್ದು, ಉಳಿದ ಭೂಮಿಯನ್ನು ವಿಶೇಷ ಆರ್ಥಿಕ ವಲಯ ನಿರ್ಮಿಸಲು KIADB ಯ ನಿರ್ಲಕ್ಷತೆಯಿಂದಾಗಿ ಬೇರೆ ಐಟಿ ಕಂಪನಿಗಳು ಇಲ್ಲಿ ತಮ್ಮ ಕಚೇರಿ ತೆರೆಯಲು ಮುಂದೆ ಬಂದಿರುವುದಿಲ್ಲ. ಇದಕ್ಕೆ ಮುಖ್ಯ ಕಾರಣ KIADB ಯವರ ನಿರ್ಲಕ್ಷತನ ಹಾಗೂ ಸದರಿ ಪ್ರದೇಶದಲ್ಲಿ ಅಗತ್ಯ ಮೂಲ ಸೌಲಭ್ಯ ಒದಗಿಸದಿಲ್ಲದಿರುವುದು. ಕೋಣಾಜೆ-ವಿಶೇಷ ಆರ್ಥಿಕ ವಲಯದಲ್ಲಿ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಿ SEZ ಅನುಮೋದಿತ ಜಾಗವನ್ನು ನವೀಕರಿಸಿ ಮಂಗಳೂರಿನ IT ಪಾರ್ಕ್ ಅನ್ನು ಅಭಿವೃದ್ಧಿಗೊಳಿಸುವ ಕುರಿತು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ**

ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲ್ಲೂಕು, ಪಜೀರು, ಕೈರಂಗಳ ಮತ್ತು ಕುರ್ನಾಡು ಗ್ರಾಮಗಳ ವಿವಿಧ ಸರ್ವೆ ನಂಬರುಗಳ 514.72 ಎಕರೆ ಜಮೀನನ್ನು ಮಾಹಿತಿ ತಂತ್ರಜ್ಞಾನ ವಿಶೇಷ ಆರ್ಥಿಕ ವಲಯ ಸ್ಥಾಪನೆಗಾಗಿ 2005-2008ನೇ ಸಾಲಿನಲ್ಲಿ ಭೂಸ್ವಾಧೀನಪಡಿಸಲಾಗಿದೆ. ಈ ಪೈಕಿ 355.28 ಎಕರೆ ಜಮೀನನ್ನು ಮೆ॥ ಇನ್ಫೋಸಿಸ್ ಟೆಕ್ನಾಲಜಿಸ್ ಲಿ.ರವರಿಗೆ ಹಂಚಿಕೆ ಮಾಡಿ, ಶುದ್ಧಕ್ರಯ ಪತ್ರ ನೀಡಲಾಗಿದೆ. ಉಳಿಕೆ 159.44 ಎಕರೆ ಜಮೀನಿನ ಪೈಕಿ 15.97 ಎಕರೆ ಜಮೀನನ್ನು ಮಾಹಿತಿ ತಂತ್ರಜ್ಞಾನ ವಿಶೇಷ ಆರ್ಥಿಕ ವಲಯ ಸ್ಥಾಪನೆಗಾಗಿ ಮೂಲಭೂತ ಸೌಕರ್ಯಗಳೊಂದಿಗೆ ಅಭಿವೃದ್ಧಿಪಡಿಸಲಾಗಿದ್ದು, ಮಾನ್ಯ ನ್ಯಾಯಾಲಯದ ಆದೇಶದಂತೆ ಜಮೀನು ಕಳೆದುಕೊಂಡ ರೈತರಿಗೆ 13.47 ಎಕರೆ ಜಮೀನಿನಲ್ಲಿ ಬದಲಿ ನಿವೇಶನಗಳನ್ನು ನೀಡಲಾಗಿದೆ.

ಮಾಹಿತಿ ತಂತ್ರಜ್ಞಾನ ವಿಶೇಷ ಆರ್ಥಿಕ ವಲಯಕ್ಕೆ ಪ್ರಸ್ತಾವಿಸಲ್ಪಟ್ಟ 159.44 ಎಕರೆ ಜಮೀನಿನ ಮಧ್ಯಭಾಗದಲ್ಲಿ ಭೂಸ್ವಾಧೀನದ ಪೂರ್ವದಲ್ಲಿಯೇ ಪಜೀರು-ಮೊಂಟುಗೋಳಿ ಜಿಲ್ಲಾ ಪಂಚಾಯತ್ ರಸ್ತೆಯು ಹಾದುಹೋಗಿರುವ ಕಾರಣ, ಎಸ್.ಇ.ಜಡ್. ನಿಯಮಾವಳಿಗಳ ಪ್ರಕಾರ ರಸ್ತೆಯ ದಕ್ಷಿಣ ಭಾಗದ 81.03 ಎಕರೆ ವಿಸ್ತೀರ್ಣವನ್ನು ಮಾತ್ರ ಎಸ್.ಇ.ಜಡ್.ಗೆ ಮೀಸಲಿರಿಸಿ ರಸ್ತೆಯ ಉತ್ತರ ಭಾಗದ 64.94 ಎಕರೆ ವಿಸ್ತೀರ್ಣವನ್ನು ಸಾಮಾನ್ಯ ಕೈಗಾರಿಕಾ ಪ್ರದೇಶವಾಗಿ ಪರಿಗಣಿಸಲು ತೀರ್ಮಾನಿಸಲಾಗಿದೆ.

ಈ ಕೈಗಾರಿಕಾ ಪ್ರದೇಶದ ನಿವೇಶನಗಳನ್ನು ಈಗಾಗಲೇ ಹಂಚಿಕೆ ಮಾಡಲಾಗಿದ್ದು, ಹಂಚಿಕೆದಾರರು ತಮ್ಮ ಉದ್ಯಮ ಸ್ಥಾಪನೆಯ ವಿವಿಧ ಹಂತಗಳಲ್ಲಿ ಕಾರ್ಯ ಪ್ರವೃತ್ತರಾಗಿರುತ್ತಾರೆ ಹಾಗೂ ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ನೀರು ಸರಬರಾಜು ಕಲ್ಪಿಸಲಾಗಿದ್ದು, ಪ್ರಸ್ತುತ ಬಡಾವಣೆ ರಸ್ತೆಗಳು ಸುಸ್ಥಿತಿಯಲ್ಲಿರುತ್ತದೆ.

ಮುಂದುವರೆದು, ಐಟಿ-ಎಸ್.ಇ.ಜಡ್ ಕೈಗಾರಿಕಾ ಪ್ರದೇಶವನ್ನು ಆಸಕ್ತ ಮಾಹಿತಿ ತಂತ್ರಜ್ಞಾನ ಉದ್ದಿಮೆದಾರರ ಕೊರತೆಯಿಂದಾಗಿ ವಿಶೇಷ ಆರ್ಥಿಕ ವಲಯ ನಿಯಮಾವಳಿಯಿಂದ ಹಿಂಪಡೆದು ಸಾಮಾನ್ಯ ಕೈಗಾರಿಕಾ ಪ್ರದೇಶವನ್ನಾಗಿ ಪರಿವರ್ತಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುಮೋದನೆಗೆ ಬಾಕಿ ಇರುತ್ತದೆ.

ಸಂಖ್ಯೆ: ಸಿಐ 249 ಐಎಪಿ (ಇ) 2021

(ಮುರುಗೇಶ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು